International Journal of Kannada Research 2021; 7(2): 29-32



International Journal of Kannada Research
www.kannadajournal.com

ISSN: 2454–5813
IJKR 2021; 7(2): 29-32
© 2021 IJKR
www.kannadajournal.com
Received: 18-02-2021
Accepted: 21-03-2021

**ಡಾ ರಾಮರೆಡ್ಡಿ ಎಸ್. ರಡ್ಡೇರ**
ಪ್ರಾಧ್ಯಾಪಕರು, ಆರ್.ಟಿ.ಇ.ಎಸ್.
ಕಲಾ, ವಾಣಿಜ್ಯ ಮತ್ತು ವಿಜ್ಞಾನ
ಪದವಿ ಕಾಲೇಜು, ರಾಣೆಬೆನ್ನೂರ್,
ಹಾವೇರಿ, ಕರ್ನಾಟಕ, ಭಾರತ

**Corresponding Author:**
**ಡಾ ರಾಮರೆಡ್ಡಿ ಎಸ್. ರಡ್ಡೇರ**
ಪ್ರಾಧ್ಯಾಪಕರು, ಆರ್.ಟಿ.ಇ.ಎಸ್.
ಕಲಾ, ವಾಣಿಜ್ಯ ಮತ್ತು ವಿಜ್ಞಾನ
ಪದವಿ ಕಾಲೇಜು, ರಾಣೆಬೆನ್ನೂರ್,
ಹಾವೇರಿ, ಕರ್ನಾಟಕ, ಭಾರತ

# ಕ್ರಾಂತಿಕಾರಿ ಶರಣ ಕೆಂಭಾವಿ ಭೋಗಣ್ಣ

**ಡಾ ರಾಮರೆಡ್ಡಿ ಎಸ್. ರಡ್ಡೇರ**

ಭೋಗ, ಭೋಗದೇವ, ಭೋಗಯ್ಯ, ಭೋಗರಸ ಇತ್ಯಾದಿ ಹೆಸರುಗಳಿಂದ ಶಾಸನ–ಕಾವ್ಯಗಳಲ್ಲಿ ಕರೆಯಲ್ಪಟ್ಟಿರುವ ಕೆಂಭಾವಿ ಭೋಗಣ್ಣನು ವೀರಶೈವ ಮಹಾಮಾನ್ವಿತ ವ್ಯಕ್ತಿಯಾಗಿರುವುದರಿಂದ ಆ ಧರ್ಮಕ್ಕೆ ಸಂಬಂಧಿಸಿದ ಅನೇಕ ಕಾವ್ಯಗಳಲ್ಲಿ ಆತನ ಜೀವನ ಚಿತ್ರವು ಮೂಡಿಬಂದಿದೆ. ಈ ಕುರಿತ ಕಾವ್ಯಗಳಲ್ಲಿ ಹರಿಹರ ಕವಿಯ ಕೆಂಭಾವಿ 'ಭೋಗಣ್ಣನ ರಗಳೆ' ಮತ್ತು ಈ ರಗಳೆಯನ್ನು ಮೂಲ ಆಕರವನ್ನಾಗಿ ಅನುಸರಿಸಿ ಬರೆದಿರಬಹುದಾದ ಚೆನ್ನಯ್ಯ ಕವಿಯ 'ಕೆಂಭಾವಿ ಭೋಗಣ್ಣನ ಸಾಂಗತ್ಯ' ಕೃತಿಗಳು ಭೋಗಣ್ಣನ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಮಹತ್ವದ ಆಧಾರಗಳಾಗಿವೆ. ಇದುವರೆಗೆ ಉಪಲಬ್ಧವಾದ ಸಾಮಾಗ್ರಿಯನ್ನು ಆಧರಿಸಿ ಹೇಳುವುದಾದರೆ ಈ ಎರಡೂ ಕೃತಿಗಳಿಗೆ 'ವಿಶೇಷವಾಗಿ ಕೆಂಭಾವಿ ಭೋಗಣ್ಣನ ಚರಿತ್ರೆಯನ್ನು ಕುರಿತು ರಚಿತವಾದ ಸ್ವತಂತ್ರ ಕಾವ್ಯ'ಗಳೆಂಬ ಮಹತ್ವವು ಸಲ್ಲುತ್ತದೆ.

ಭೀಮಕವಿಯ 'ಬಸವಪುರಾಣ(ಸಂಧಿ–56,ಪದ್ಯ–51–55), ಷಡಕ್ಷರದೇವನ 'ಬಸವರಾಜ ವಿಜಯಂ'(ಸಂಧಿ–39,ಪದ್ಯ–1–25), ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'; ಉತ್ತರದೇಶದ ಬಸವಲಿಂಗಕವಿಯ 'ಬಸವೇಶ್ವರ ಪುರಾಣದ ಕಥಾಸಾಗರ', ವೀರಭದ್ರ ಕವಿಯ 'ಅರವತ್ತು ಮೂವರು ಪುರಾತನರ ಪುರಾಣ'(ಸಂಧಿ–19,ಪದ್ಯ–20–35)– ಈ ಎಲ್ಲ ಕೃತಿಗಳಲ್ಲಿಯೂ[1] ಕೆಂಭಾವಿ ಭೋಗಣ್ಣನನ್ನು ಕುರಿತು ತಕ್ಕಮಟ್ಟಿಗೆ ವಿವರವಾದ ನಿರೂಪಣೆಯಿದೆ. ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ' (ಸಂಧಿ–37,ಪದ್ಯ–124–25), ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ' (ಕಾಂಡ–8,ಸಂಧಿ–5, ಪದ್ಯ–10–17), ಕಕ್ಕಿರಿಯಾರಾಧ್ಯ ನಂಜುಂಡ ಕವಿಯ 'ಭೈರವೇಶ್ವರ ಕಾವ್ಯ' (3–111,4–91,5–103), ಗೌರವಾಂಕನ 'ಮೋಳಿಗೆಯ್ಯನ ಪುರಾಣ' (ಸಂಧಿ–4, ಪದ್ಯ–89), ವಿರುಪಾಕ್ಷ ಕವಿಯ 'ಚೆನ್ನಬಸವಪುರಾಣ'(ಸಂಧಿ–57,ಪದ್ಯ–23), ಎಳಂದೂರು ಹರೀಶ್ವರನ 'ಪ್ರಭುದೇವಪುರಾಣ' (ಸಂಧಿ–6,ಪದ್ಯ–93–94), ವಿರತ ತೋಂಟದಾರ್ಯನ 'ಪಾಲ್ಕುರಿಕೆಯ ಸೋಮೇಶ್ವರ ಪುರಾಣಂ' (ಸಂಧಿ–4,ಪದ್ಯ–46–47) ಮತ್ತು 'ನಿರಂಜನ ಶತಕ' (ಪದ್ಯ–21), ಚಿಕ್ಕ (ಸಿದ್ಧ)ನಂಜೇಶನ 'ರಾಘವಾಂಕ ಚಾರಿತ್ರ್ಯ' (ಸಂಧಿ–8,ಪದ್ಯ–18) ಮತ್ತು 'ಗುರುರಾಜಚರಿತ್ರೆ' (ಸಂಧಿ–9, ಪದ್ಯ–63) ಮುಂತಾದ ಕಾವ್ಯಗಳಲ್ಲಿನ[2] ಭೋಗಣ್ಣನ ಜೀವನಕ್ಕೆ ಸಂಬಂಧಿಸಿದ ಸಂಕ್ಷಿಪ್ತವಾದ ವಿವರಣೆಯೂ ಕಲಾತ್ಮಕವಾಗಿ ಚಿತ್ರಿಸಲಾಗಿದ್ದು ಕಂಡುಬರುತ್ತದೆ. ಭೋಗಣ್ಣನಿಗೆ ಸಂಬಂಧಿಸಿದ ವಿಷಯದ ದೃಷ್ಟಿಯಿಂದ ಈ ಎಲ್ಲ ಕಾವ್ಯಗಳಿಗೆ ಹರಿಹರ ಕವಿಯ 'ಭೋಗಣ್ಣನ ರಗಳೆ'ಯೇ ಮೂಲ ಆಕರವಾಗಿರುವಂತೆ ತೋರುತ್ತದೆ. ಕೆಲವು ಕಾವ್ಯಗಳಲ್ಲಿ ಸ್ವತಂತ್ರವಾದ ವಿವೇಚನೆಯೂ ಕಂಡುಬರುತ್ತದೆ. ಆದ ಕಾರಣ ಹರಿಹರನ 'ಭೋಗಣ್ಣನ ರಗಳೆ'ಯನ್ನು ಪ್ರಮುಖವಾಗಿರಿಸಿಕೊಂಡು ಮೇಲೆ ಉಲ್ಲೇಖಿಸಿದ ಇನ್ನುಳಿದ ಕಾವ್ಯಗಳನ್ನು, ವಿದ್ವಾಂಸರ ಲೇಖನಗಳನ್ನೂ ಆಧರಿಸಿಕೊಂಡು ಕೆಂಭಾವಿ ಭೋಗಣ್ಣನ ಜೀವನ ಮತ್ತು ಸಾಧನೆಗಳನ್ನು ಈ ಕೆಳಗಿನಂತೆ ನಿರೂಪಿಸಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿದ್ದ ಕೆಂಭಾವಿಯು ಸಗರನಾಡಿನ ಒಂದು ಪಟ್ಟಣವಾಗಿತ್ತು. ಅಲ್ಲಿ ವೈದಿಕ ಕುಟುಂಬಗಳ ಬಾಹುಳ್ಯವಿತ್ತು. ಆ ಪಟ್ಟಣದ ವೈದಿಕ ಕುಟುಂಬವೊಂದರಲ್ಲಿ ಭೋಗಣ್ಣನ ಜನನವಾಯಿತು. ಭೋಗಣ್ಣನು ಮೊದಲು ಶೈವ ಬ್ರಾಹ್ಮಣನಾಗಿದ್ದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[3] ಮೊದಲು ವೈದಿಕರಿದ್ದು, ವೀರಶೈವಧರ್ಮವನ್ನಳವಡಿಸಿಕೊಂಡ ಬಹುತೇಕ ಶಿವಶರಣರು ಪ್ರಾಯಶಃ ಶೈವಬ್ರಾಹ್ಮಣರಾಗಿದ್ದಂತೆ ತೋರುವುದರಿಂದ ವಿದ್ವಾಂಸರ ಊಹೆಯು ಸಮಂಜಸವೆನಿಸುತ್ತದೆ.

ಭೋಗಣ್ಣನ ಬಾಲ್ಯ ಜೀವನದ ಬಗೆಗೆ 'ಕೆಂಭಾವಿಯ ಭೋಗಣ್ಣನ ಸಾಂಗತ್ಯ'[4]ದಲ್ಲಿ ವಿವರಣೆಯಿದೆ.

ವಿಪ್ರಕುಲದಲ್ಲಿ ಜನಿಸಿದರೂ ಭೋಗಣ್ಣನ ಒಡನಾಟವೆಲ್ಲ ಶಿವಭಕ್ತರೊಂದಿಗೆ ಇರುತ್ತಿತ್ತು. ಇದರಿಂದಾಗಿ ಅವನಲ್ಲಿ ಭಕ್ತಿಯ ಅಂಕುರವಾಗತೊಡಗಿತು. ಇತ್ತ ಮನೆಯಲ್ಲಿ ಮಾತಾ–ಪಿತರು ನಿತ್ಯದ ಕರ್ಮ–ಅನುಷ್ಠಾನ–ಜಪ–ತಪಗಳಲ್ಲಿ ತೊಡಗಿದ್ದರೆ, ಅತ್ತ ಭೋಗಣ್ಣನು ಭಕ್ತರ ಸಂಗದಲ್ಲಿ ಬೆರೆತು ಅವರ ನಡೆ–ನುಡಿಯಿಂದ ಆಕರ್ಷಿತನಾಗಿ ಶಿವಭಕ್ತನಾಗಬೇಕೆಂದು ತವಕಪಡುತ್ತಾನೆ. ಮಗನು ವೈದಿಕಬಾಹಿರನಾಇ ಬೆಳೆಯುವುದನ್ನು ಕಂಡು ಭೋಗಣ್ಣನ ತಂದೆ–ತಾಯಿಗಳು ದುಃಖಪಡುತ್ತಾರೆ. ಹೇಗಾದರೂ ಮಾಡಿ ಭೋಗಣ್ಣನು ಶಿವಭಕ್ತನಾಗದಂತೆ ತಡೆಯಬೇಕೆಂದು ಪ್ರಯತ್ನಿಸುತ್ತಾರೆ. ಅವರ ಪ್ರಯತ್ನ ಫಲಿಸುವುದಿಲ್ಲ. ಕೊನೆಗೊಮ್ಮೆ ಭೋಗಣ್ಣನು ಮನೆಯನ್ನು ತೊರೆದು ಶಿವಭಕ್ತದೀಕ್ಷೆಯನ್ನು ಪಡೆದು, ಲಿಂಗವಂತರ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸುತ್ತಾ ಇರುತ್ತಾನೆ. ಇದನ್ನು ಸಹಿಸದ ಆ ಊರಿನ ಮುನಿಜನಸಮೇತ ವೈದಿಕರೆಲ್ಲರೂ ಒಂದಾಗಿ ಸೇರಿ, ಭೋಗಣ್ಣನಿದ್ದೆಡೆಗೆ ಬಂದು, ಕೈಮುಗಿದು 'ಕಂದ ಕೇಳಯ್ಯ ಲಿಂಗವ ಕಟ್ಟಿಕೊಂಡರೆ, ಕುಂದು ಬರ್ಪುದು ಬುಧಜನಕೆ' ಎಂದು ನಾನಾ ರೀತಿಯಿಂದ ಬುದ್ಧಿವಾದವನ್ನು ಹೇಳುತ್ತಾರೆ. ಅವರಲ್ಲಿಯ ಕೆಲ ಬುಧರು 'ಭೋಗಣ್ಣ ಕೊರಳಿಗೆ ಕಲ್ಲ ಕಟ್ಟಿದ'ನೆಂದು ನಿಲ್ಲದೆ ನಗುತ್ತಾರೆ. ಮತ್ತೆ ಕೆಲವರು ಭಕ್ತಿ ದೀಕ್ಷೆಯನ್ನು ಬಿಟ್ಟುಬಿಡೆಂದು ಜರಿದು ನುಡಿಯುತ್ತಾರೆ. ವಿಪ್ರರ ಈ ಎಲ್ಲ ಪ್ರತಿಕ್ರಿಯೆಗೆ ಉತ್ತರವಾಗಿ ಭೋಗಣ್ಣನು ನಿಶ್ಚಲವಾಗಿ ನುಡಿಯುತ್ತಾನೆ.

"ಲಿಂಗವನವಧರಿಸಿಯು ಭಕ್ತನಹೆನು
ಜಂಗಮಲಿಂಗ ಒಕ್ಕುದನು
ಲಿಂಗಶುದ್ಧಗಳಾಗಿ ಕೊಂಬೆನು ನಾ ನಿಮ್ಮ
ಹಿಂಗುವೆನಂತ್ಯಜ ಕುಲವ"

ಎಂಬುದಾಗಿ ಶಿವಭಕ್ತನ ಮಹತ್ವವನ್ನು, ಶಿವನ ಲೀಲೆಯನ್ನು, ಷಟಸ್ಥಲ, ಪಂಚಾಚಾರ, ಅಷ್ಟಾವರಣಗಳ ಮಹಿಮೆಯನ್ನು ಭೋಗಣ್ಣನು ವಿಪ್ರರೆದುರಿಗೆ ಬಹುವಾಗಿ ಹೊಗಳುತ್ತಾನಲ್ಲದೆ, 'ವಿಪ್ರಕುಲವ ಬಿಟ್ಟು ಭಕ್ತರಾದರೆ ಬಹುಕರ್ಪುರ ಶಿಖಿಯು ಕೊಂಡಂತೆ', 'ಪರುಷ ಮುಟ್ಟಿದ ಲೋಹ ಸುವರ್ಣವಾದಂತೆ' ಎಂದು ತಾನು ಪಡೆದ ಶಿವಭಕ್ತಿಯ ಸಾರ್ಥಕತೆಯನ್ನು ಸಮರ್ಥಿಸುತ್ತಾನೆ.

ಭೋಗಣ್ಣನ ಭಕ್ತಿಯ ನಿಶ್ಚಲತೆಯನ್ನು ಅರಿತ ಗುರು ಅಲ್ಲಿಯ ಲಿಂಗವಂತರ ಸಮ್ಮುಖದಲ್ಲಿ ಆತನಿಗೆ ಲಿಂಗದೀಕ್ಷೆಯನ್ನು ದಯಪಾಲಿಸುತ್ತಾನೆ. ಜೊತೆಗೆ ಭೋಗಣ್ಣನ ವಿವಾಹವೂ ನೆರವೇರುತ್ತದೆ. ಭೋಗಣ್ಣನು ಸತಿಗೂ ಲಿಂಗಧಾರಣೆ ಮಾಡಿಸುತ್ತಾನೆ. ನವದಂಪತಿಗಳಿಗೆ ದೀಕ್ಷೆಯನ್ನು ನೀಡಿದ ಶ್ರೀ ಗುರುವು 'ಶಿವನ ಭಕ್ತರಲ್ಲಿ ಸುಖಿಯಾಗಿ ಬಾಳಿ'ರೆಂದು ಆಶೀರ್ವದಿಸುತ್ತಾನೆ. ಹೀಗೆ ವಿಚಾರಶೀಲನಾದ ಭೋಗಣ್ಣನು ಆಚಾರಶೀಲ ಭಕ್ತನಾಗಿ ಬಹುವಿಧವಾದ ಭಕ್ತಿಯಿಂದ ಬದುಕುತ್ತಿದ್ದನು. ಇದು ಚೆನ್ನಯ್ಯ ಕವಿವಿರಚಿತ 'ಕೆಂಭಾವಿ ಭೋಗಣ್ಣನ ಸಾಂಗತ್ಯ'ದ ಮೊದಲನೆಯ ಸಂಧಿಯಲ್ಲಿ ಬರುವ, ಮತ್ತೆಲ್ಲಿಯೂ ಕಂಡರಿಯದ ಭೋಗಣ್ಣನ ಆರಂಭದ ಬದುಕಿನ ಚಿತ್ರಣವಾಗಿದೆ. ಇಲ್ಲಿ ಭೋಗಣ್ಣನ ತಂದೆ–ತಾಯಿ ಮತ್ತು ಹೆಂಡತಿಯ ಹೆಸರನ್ನು ಹೇಳದಿರುವುದರಿಂದ ಇದೆಲ್ಲ ಕವಿಯ ಕಾಲ್ಪನಿಕ ಸೃಷ್ಟಿಯೆಂದು ಭಾವಿಸಲು ಎಡೆಮಾಡಿಕೊಡುತ್ತದೆ. ಈ ಕೃತಿಯಲ್ಲಿರುವಂತೆ ಬೇರಾವ ಕಾವ್ಯದಲ್ಲಿಯೂ ಭೋಗಣ್ಣನ ಆರಂಭದ ಜೀವನಕ್ಕೆ ಸಂಬಂಧಿಸಿದ ವಿವರವು ಲಭ್ಯವಿಲ್ಲದಿರುವುದರಿಂದ ಶರಣ ಭೋಗಣ್ಣನ ಉತ್ತರದ ಜೀವನಕ್ಕೆ ಒಪ್ಪುವಂತೆ ಪೂರ್ವೇತಿಹಾಸವನ್ನು ಸೃಷ್ಟಿಸಿದ ಚೆನ್ನಯ್ಯ ಕವಿಯ ಕಾರ್ಯವು ಶ್ಲಾಘನೀಯವಾಗಿದೆ.

ಭಕ್ತನಾದ ಭೋಗಣ್ಣನು ವೀರಶೈವಧರ್ಮಕ್ಕೆ ಒಪ್ಪುವ ಆಚಾರಶೀಲ ನಡೆ–ನುಡಿಯಿಂದ ಬಾಳುತ್ತ ತನ್ನದೆ ಆದ ಕೆಲವು ನಿಯಮಗಳನ್ನು ಪರಿಪಾಲಿಸುತ್ತಿದ್ದನು. ಹಾಗೆ ನಿಯಮಗಳನ್ನು ಪಾಲಿಸುವಲ್ಲಿ ಶಿವಲಾಂಛನವುಳ್ಳ ಸರ್ವವೂ ಶಿವಮಯವೆಂಬುದು ಆತನ ದೃಢವಾದ ನಿಲುವಾಗಿತ್ತು. ಇದು ಕಾರಣವಾಗಿ ಭೋಗಣ್ಣನು–

"ಶಿವಭಕ್ತರೊಳಗೆ ಜಾತಿಯ ವಿಚಾರಿಪುದಿಲ್ಲ
ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ
ಶಿವಭಕ್ತರೊಳಗೆ ಜಾಣ್ನುಡಿಯನಱಸುವುದಿಲ್ಲ
ಹರಭಕ್ತರೊಳಗಧಿಕ ವಿದ್ಯೆವಱಸುವುದಿಲ್ಲ
ವೇಷವಿರ್ದಲ್ಲಿ ಗಿರಿಜೇಶನಿರ್ದಪನೆಂದು
ವೇಷವಿರ್ದಲ್ಲಿ ಸರ್ವೇಶನಿರ್ದಪನೆಂದು"[5]

ಭಕ್ತಿ ಹಾಗೂ ಶ್ರದ್ಧೆಯಿಂದ ನಂಬಿ ಬಾಳುತ್ತಿದ್ದನು. ಶರಣರ ಭಕ್ತಿಯ ಫಲವು ಬೆಳೆದು ಪಕ್ವಗೊಂಡು ಪ್ರಾಮಾಣಿಕವಾಗಿ ನೆಲೆಗೊಂಡಾಗ ಪರಶಿವನು ತನಗೆ ತೋಚಿದ ವೇಷದಲ್ಲಿ ಬಂದು ಅವರ ಭಕ್ತಿಯನ್ನು ಸತ್ವಪರೀಕ್ಷೆಗೆ ಒಳಪಡಿಸುವುದು ವೀರಶೈವ ಕಾವ್ಯಗಳು ನಿರೂಪಿಸುವ ಶಿವಶರಣರ ಇತಿಹಾಸದಲ್ಲಿ ಸಾಮಾನ್ಯವಾಗಿದೆ. ಅಂತೆಯೇ ಕೆಂಭಾವಿ ಭೋಗಣ್ಣನ ಜೀವನದಲ್ಲಿ ಕೂಡಾ ಅಂತಹ ಸತ್ವಪರೀಕ್ಷೆಯ ಕಾಲವು ಬಂದೊದಗುತ್ತದೆ.

ಭೋಗಣ್ಣನು ಕಾಯಾ–ವಾಚಾ–ಮನಸಾ ತ್ರಿಕರಣಶುದ್ಧಿಯಿಂದ ಭಕ್ತಪ್ರೇಮಿಯಾಗಿ, ಜಂಗಮ–ಪ್ರೇಮಿಯಾಗಿ, ದಾಸೋಹಪ್ರಿಯನಾಗಿ ಜೀವನ ಸಾಗಿಸುತ್ತಿದ್ದನು. ಹರಭಕ್ತರಲ್ಲಿ ಜಾತಿಯನೆಣಿಸುವುದಿಲ್ಲವೆಂಬ ಆತನ ಮನೋದೃಢತೆಯನ್ನು ಪರೀಕ್ಷಿಸಲು ಇಂದುಧರನು ಶ್ವಪಚ ವೇಷವನ್ನು ಧರಿಸಿ ಭೋಗಣ್ಣನಿದ್ದೆಡೆಗೆ ಬರುತ್ತಾನೆ.

"ಹೆಗಲ ಮಿಣಿ ಕೈಯ ಸಂಬಳಿಗೋಲಿನೀಶ್ವರಂ
ಸೊಗಯಿಪ ರುದ್ರಾಕ್ಷಿಯ ಕೃಪಾಕರಂ"

ಆಗಿ ಬಂದ ಶ್ವಪಚ ವೇಷದ ಶಿವನು ಭೋಗಣ್ಣನ ಮನೆಯ ಮುಂದೆ ಸುಳಿಯಲು ಶ್ವಪಚನ ಭಾವವನ್ನೇ ಮನದಲ್ಲಿ ಮೂಡಿಸಿಕೊಳ್ಳದ ಭೋಗಣ್ಣನು ಆತನಲ್ಲಿಯ ಶಿವಭಕ್ತನ ಚಿಹ್ನೆಗಳಾದ ವಿಭೂತಿ–ರುದ್ರಾಕ್ಷಿಗಳನ್ನು ಕಂಡು ಭಕ್ತಿಭಾವ ಉಕ್ಕಿ, ಎಂದಿನಂತೆ ಜಂಗಮನೆಂದು ಬಗೆದು ಆದರದಿಂದ ಸತ್ಕರಿಸುತ್ತಾನೆ. 'ಮುಂದೈಸಿ ಪುಳಕಂಗಳೊಪ್ಪೆ ಪದಮಂ ಪಿಡಿದು' ಜಂಗಮಾರ್ಚನೆಯನ್ನು ಮಾಡುತ್ತಾನೆ. ಇದನ್ನು ಕಣ್ಣಾರೆ ಕಂಡ ನೆರೆಹೊರೆಯ ವಿಪ್ರರು ಸಿಡಿಮಿಡಿಗೊಂಡು ಬಡುಮನದ ಸಂಕುಚಿತ ಭಾವನೆಗಳಿಗೊಳಪಟ್ಟು ಭೋಗಣ್ಣನನ್ನು ಕುಲಘಾತಕನೆಂದು ತಿಳಿದು ಜರಿಯುತ್ತಾರೆ. ಇದಾವುದಕ್ಕೂ ಬೆಲೆಕೊಡದ ಭೋಗಣ್ಣನು ಅತಿಥಿ ಜಂಗಮನನ್ನು ಬಹುವಿಧವಾಗಿ ಅರ್ಚಿಸುತ್ತಾನೆ.

"ಕಯ್ಗೊಟ್ಟು ಹರುಷದಿಂದಂ ಮನೆಗೆ ನಡೆತಂದು
ಮೆಯ್ಗರೆದು ಕುಗ್ಗಿ ಭಯಭಕ್ತಿಯಿಂದಂ ನಿಂದು
ಉನ್ನತಾಸನಮನಿತ್ತಾನಂದಮಂ ತಳೆದು
ಪನ್ನಗಾಭರಣನ ಪದದ್ವಯಮುಮಂ ತೊಳೆದು
ಪಾದೋದಕಂಗಳಂ ಕಣ್ಗಳೊಳಗೊತ್ತುತಂ"[6]

ಬಹುವಿಧವಾಗಿ ಅರ್ಚಿಸುತ್ತಾನೆ. ಮನೆಯಲ್ಲಿ ಆರೋಗಿಸಬೇಕೆಂದು ಬೇಡಿಕೊಳ್ಳುತ್ತಾನೆ. ಜಂಗಮನ ಆರೋಗಣೆಯ ನಂತರ ಮಿಕ್ಕುಳಿದ ಪ್ರಸಾದವನ್ನು ಭಕ್ತಿಯಿಂದ ಸೇವಿಸುತ್ತಾನೆ. ಭೋಗಣ್ಣನ ಈ ಅತಿಭಕ್ತಿಯನ್ನು ಸಹಿಸದಾದ ಊರ ವಿಪ್ರರೆಲ್ಲರೂ ಒಟ್ಟುಗೂಡಿ

ಊರ ದೊರೆಯಾದ ಚಂದಿಮರಸನಲ್ಲಿಗೆ ಬಂದು ದೂರು ನೀಡುತ್ತಾರೆ.

"ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀಱಿ
ತಮ್ಮ ಭಕ್ತಚಾರವೆಗ್ಗಳಂ ತಲೆಗೇಱಿ
ಹೊಲೆಗಲಸಿ ನೆಲೆಗೆಟ್ಟು ಛಲವುಡುಗಿ ಕುಲವಳಿದು
ಹೊಲೆಯನೆನ್ನದೆ ಹಿರಿಯ ಭಕ್ತನೆಂದಱಿದಱಿದು
ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ
ಸಂದ ವಿಪ್ರರ ಕರ್ಮವೆಲ್ಲಮಂ ಪುಸಿ ಮಾಡಿ
ಹೊಲೆನಂ ಮುಂದಿಟ್ಟುಕೊಂಡೈದನೆಲೆಯರಸ
ಕುಲವೆಲ್ಲ ನಿರ್ಮೂಲವಾದುದಿಂದೆಲೆಯರಸ
ಆತನಂ ಕರೆಯಿಪುದು ಪೊಱಮಡಿಪುದಲ್ಲದಡೆ
ಆತನಿರಲಾವೆಲ್ಲ ಪೋದಪ್ಪೆವಲ್ಲದಡೆ"[7]

ಎಂದೆಲ್ಲ ಹೇಳಿದ ದ್ವಿಜರು ಅರಸನ ತಲೆಯಲ್ಲಿ ಭೋಗಣ್ಣನು ಮಹಾಪರಾಧಿಯೆಂಬುದನ್ನು ಮೂಡಿಸುತ್ತಾರೆ.

ವಿಪ್ರರ ಮಾತುಗಳನ್ನು ಕೇಳಿ ಕೋಪಗೊಂಡ ಚಂದಿಮರಸನು ಭೋಗಣ್ಣನನ್ನು ಕರೆಕಳಿಸುತ್ತಾನೆ. 'ಏನಯ್ಯ ಪುರದೊಳಗೆ ಅಕೃತ್ಯವಂ ಮಾಳ್ಪರೆ? ಏನಾದಡಂ ಹೊಲೆಯರಂ ಹೊಗಿಸಿ ಬಾಳ್ವರೆ? ಮನೆಯೊಳಗೆ ಅನಾಮಿಕನನ್ನು ಹೊಗಿಸುವರೆ? ಭೋಗಣ್ಣ ಮನಸಾರೆ ಹೇಳು, ಇದು ನಿಮ್ಮ ಧರ್ಮವೇ?' ಎಂದು ಅರಸನು ಪ್ರಶ್ನಿಸುತ್ತಾನೆ. ಆಗ ಭೋಗಣ್ಣನು 'ಶಿವನಱಿಯದ ಹೊಲೆಯರಂ ಹೊಗಿಸೆ. ಕೇಳರಸ, ಶಿವಭಕ್ತನಂ ಹೊಗಿಸಿದೆಂ ತಪ್ಪೆ' ಎಂದು ಮಾರ್ನುಡಿಯುತ್ತಾನೆ. ಭೋಗಣ್ಣನ ಈ ನಿಷ್ಠುರದ ಮಾತುಗಳನ್ನು ಕೇಳಿ ಅರಸನು ಮತ್ತಷ್ಟು ಕೋಪಗೊಂಡು ಊರು ಬಿಟ್ಟು ಹೋಗುವಂತೆ ಆಜ್ಞೆ ಮಾಡುತ್ತಾನೆ.

ಕಡುಮಾನಿಯಾದ ಭೋಗಣ್ಣನು ತಡಮಾಡದೆ ಊರು ಬಿಟ್ಟು ಹೊರಡುತ್ತಾನೆ. ಭಕ್ತನೇ ಊರು ಬಿಟ್ಟು ಹೊರಟ ಮೇಲೆ ಆ ಊರಿನ ದೇವರ ಇರವಾದರೂ ಹೇಗೆ ಇದ್ದೀತು?

"ಒಂದಡಿಯನಿಡೆ ಪುರದ ಲಿಂಗವೊಡನುಬ್ಬಿದವು
ಮುಂದುಕಡಿಯಿಡೆ ಪುರದ ಲಿಂಗವೊಡನೆಳಸಿದವು
ನಡೆಯೆ ನಡೆದವು ಪುರದ ಶಿವಲಿಂಗವೊಂದಾಗಿ"[8]

ಹೀಗೆ ಊರ ಲಿಂಗಗಳೆಲ್ಲವೂ ಭೋಗಣ್ಣನ ಹಿಂದೆ ಹೊರಡುತ್ತವೆ. ಆ ಲಿಂಗಗಳೆಲ್ಲವೂ ಭೋಗಣ್ಣನೊಂದಿಗೆ ಹೋಗಿ 'ಕೂಡಲಗಿ' ಎಂಬ ಗ್ರಾಮದಲ್ಲಿ ಒಂದು ದಿನ ವಿಶ್ರಾಂತಿ ಪಡೆದವೆಂದು ಅಲ್ಲಿನ ಸ್ಥಳೇತಿಹಾಸ ಹೇಳುತ್ತದೆ. ಈ 'ಕೂಡಲಗಿ' ಗ್ರಾಮವು ಕೆಂಭಾವಿಗೆ ಸುಮಾರು 15 ಕಿ.ಮೀ.ಗಳ ಅಂತರದಲ್ಲಿದ್ದು, ಸುರಪುರ ತಾಲೂಕಿನಲ್ಲಿದೆ. ಮಾರನೆಯ ದಿನ ಬೆಳಗಾಗುತ್ತಲೆ ನೇಮವನ್ನು ಮಾಡಬೇಕೆಂದು ವಿಪ್ರರೆಲ್ಲರು ಸೇರಿ ಶಿವಾಲಯಗಳಿಗೆ ಹೋಗುತ್ತಾರೆ. ಎಲ್ಲಾ ಶಿವಾಲಯಗಳಲ್ಲಿನ ಲಿಂಗಗಳನಗಲಿದ ಬರೀ ಪೀಠಗಳನ್ನು ಕಂಡು ಆಶ್ಚರ್ಯಚಕಿತರಾಗುತ್ತಾರೆ. ದೊರೆ ಚಂದಿಮರಸನಿಗೆ ವಿಷಯವನ್ನು ತಿಳಿಸುತ್ತಾರೆ. ಲಿಂಗಗಳೆಲ್ಲ ಭೋಗಣ್ಣನ ಹಿಂದೆ ಹೋದವೆಂದು ಬಗೆಯುತ್ತಾರೆ.

ಭೋಗಣ್ಣನ ವ್ಯಕ್ತಿತ್ವವನ್ನು, ಭಕ್ತಿಯ ಮಹತ್ವವನ್ನು ಅರಿತ ಚಂದಿಮರಸನು ಭೋಗಣ್ಣನನ್ನು ಮೆರವಣಿಗೆಯೊಂದಿಗೆ ಪುನಃ ಕೆಂಭಾವಿಗೆ ಕರೆತರಬೇಕೆಂದು ವಿಪ್ರರಿಗೆ ಆದೇಶ ಮಾಡುತ್ತಾನೆ. ವಿಪ್ರರೆಲ್ಲರು ಭೋಗಣ್ಣನಿದ್ದ (ಕೂಡಲಗಿ?) ಸ್ಥಳಕ್ಕೆ ಅರಸುತ್ತಾ ಬಂದು, ಪೊಡಮಟ್ಟುನಿಂದು ಪರಿಪರಿಯಿಂದ ಮರಳಿ ಊರಿಗೆ ಬರಬೇಕೆಂದು ಬೇಡಿಕೊಳ್ಳುತ್ತಾರೆ. ಆಗ ಭೋಗಣ್ಣನು ಲಿಂಗಗಳನ್ನು–ಪೀಠಗಳನ್ನು ಒಂದು ಮಾಡುವೆನೆಂಬ ಧಾಟಿಯಲ್ಲಿ 'ದೇವರಂ ದೇವಿಯರನೊಂದು ಮಾಡುವೆನೆಂದು' ಮನದಲ್ಲಿ ಬಗೆದು, ವಿಪ್ರರ ಕ್ಷಮೆಯನ್ನು ಮನ್ನಿಸಿ ಮರಳಿ ಕೆಂಭಾವಿಗೆ ಬರುತ್ತಾನೆ. ಈ ಸಂದರ್ಭಕ್ಕೆ ಹೊಂದುವ ಮತ್ತು ಚಂದಿಮರಸನ ಜೀವನದ ಮೇಲೆ ಬೆಳಕು ಚೆಲ್ಲುವ ಮಹತ್ವದ ವಿಷಯವೊಂದು 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ'ದಲ್ಲಿದೆ. ಅದೆಂದರೆ, ಭಕ್ತಿಯ ಮಹತ್ವವನ್ನರಿತ "ಚಂದಿಮರಸ ವಿಪ್ರಾಚಾರವ ಬಿಟ್ಟು ಶಿವಭಕ್ತಿಯಾಚಾರವನಾಚರಿಸಿ ಗುರುಕೃಪೆಯಿಂದ ನಿಜವನಱಿದು ಚಿಮ್ಮಲಿಗೆಯ ಚೆನ್ನರಾಮನೆಂಬ ತಮ್ಮಿಷ್ಟಲಿಂಗದಲ್ಲಿ ಸ್ವಯಪರವೆಂಬುದನಱಿಯದೆ ನಿತ್ಯಾನಂದ ಸುಖದಲ್ಲಿದ್ದರು"[9] ಎಂಬುದು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ವಿಪ್ರಕುಲದವನೂ ಅರಸನೂ ಆಗಿದ್ದ ಚಂದಿಮರಸನು ಭೋಗಣ್ಣನ ಗಟನೆಯಿಂದ ಪರಿವರ್ತನೆಗೊಂಡು ಶಿವಭಕ್ತನೂ, ವಚನಕಾರನೂ ಆದನೆಂಬುದು. ಹೀಗೆ ಕೆಂಭಾವಿ ಭೋಗಣ್ಣನ ಆದರ್ಶಮಯವಾದ ಭಕ್ತಿಯ ಬದುಕು ರಾಜಮನ್ನಣೆಯನ್ನು ಪಡೆದು ರಾಜನನ್ನು ಶಿವಶರಣನನ್ನಾಗಿ ಪರಿವರ್ತಿಸುವ ಮೂಲಕ ವೀರಶೈವ ಧರ್ಮದ ಬೆಳವಣಿಗೆಗೆ ಸಹಾಯಕವಾಯಿತೆಂದು ಹೇಳಬಹುದು.

ವೀರಜಂಗಮನಿಷ್ಠೆ, ದೇವನೊಲುಮೆ, ವೀರಶೈವಧರ್ಮ ಪ್ರಚಾರ ಮತ್ತು ವಚನ ರಚನೆ ಇವು ಕೆಂಭಾವಿ ಭೋಗಣ್ಣನ ಬದುಕಿನ ಮಹಾಸಾಧನೆಗಳೆಂದು ಹೇಳಬಹುದಾಗಿದೆ. ವೀರಶೈವಧರ್ಮದ ಬೆಳವಣಿಗೆಯ ಆರಂಭದ ಕಾಲದಲ್ಲಿ ಅದನ್ನು ಪ್ರಚಾರಗೊಳಿಸಲು ಪ್ರಯತ್ನಿಸಿದ ಕೆಲವೇ ಜನ ಪ್ರಮುಖ ಶಿವಶರಣರಲ್ಲಿ ಕೆಂಭಾವಿ ಭೋಗಣ್ಣನು ಒಬ್ಬನಾಗಿದ್ದಾನೆ. ವೀರಶೈವ ಧರ್ಮವು ಜಾತಿ–ಮತ–ಪಂಥಗಳ ಸಂಕುಚಿತವಾದ ಸೀಮೆಯಿಂದ ಮುಕ್ತಗೊಂಡು ವಿಶಾಲವಾಗಿ ಬೆಳೆಯುವುದಕ್ಕೆ ಈತನು ಆಚಾರಸಮೇತನಾಗಿ ಪ್ರಯತ್ನಿಸಿದ್ದು ಕಂಡುಬರುತ್ತದೆ. ಕಾವ್ಯಗಳಲ್ಲಿ ಬರುವ "ಶಿವನು ಶ್ವಪಚ ವೇಷದಲ್ಲಿ ಭೋಗಣ್ಣನ ಮನೆಗೆ ಬಂದ"ನೆಂಬ ವಿಚಾರವು ಸಾಂಕೇತಿಕವಾಗಿದ್ದು, ಶಿವಭಕ್ತಿದೀಕ್ಷೆಯನ್ನು ಪಡೆದ ಅಂತ್ಯಜನು ಶರಣತತ್ವವನ್ನು ಪಾಲಿಸುವುದರಿಂದ ವೀರಶೈವಧರ್ಮದಲ್ಲಿ ಶರಣನಾಗುತ್ತಾನೆ ಎಂಬುದನ್ನು ಅದು ಸೂಚಿಸುತ್ತದೆ. ಶಿವಭಕ್ತರಾದವರು ಶರಣರಲ್ಲಿ ಜಾತಿಯನ್ನು ವಿಚಾರಿಸಬಾರದು; ದೇವನ ಒಲುಮೆಗೆ ಸಿದ್ಧರಾದ ಶರಣರೆಲ್ಲರೂ ಸಮಾನರು ಎಂಬುದು ಆ ಕಾಲದ ವೀರಶೈವಧರ್ಮದ ಒಂದು ಆಚಾರವಾಗಿತ್ತು. ಜಾತಿಯಿಂದ ಮುಕ್ತವಾದ ಈ ಧಾರ್ಮಿಕ ವ್ಯವಸ್ಥೆಯು ಸಮಾಜದ ಕೆಳವರ್ಗದವರಿಗೆ ವರವಾಗಿ ಪರಿಣಮಿಸಿತು. ಅಂತ್ಯಜರು ಊರಿನೊಳಗೆ ಸುಳಿಯಬಾರದೆಂಬ ಪಾರಂಪರಿಕ ಮೂಢನಂಬಿಕೆಯನ್ನು ಸಡಿಲಗೊಳಿಸಿದ ಶರಣರು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕಲ್ಪಿಸಿದರು. ಇದರಿಂದ ದಾರ್ಶನಿಕ ಮಾರ್ಗವು ಸಮಾಜೀಕರಣಗೊಂಡಂತಾಯಿತು. ಈ ವ್ಯವಸ್ಥೆಯು ಆರಂಭದ ಹಂತದಲ್ಲಿ ಅಂತ್ಯಜನನ್ನು ಸತ್ಕರಿಸಿ, ಮನೆಯಲ್ಲಿ ಆರೋಗಿಸಿದ ಭೋಗಣ್ಣನ ಧೈರ್ಯವು ಮೆಚ್ಚಿಕೊಳ್ಳವಂಥದ್ದು. ಭೋಗಣ್ಣನ ಈ ರೀತಿಯ ಧಾರ್ಮಿಕ ಕ್ರಿಯೆಯನ್ನು 'ವೀರಜಂಗಮನಿಷ್ಠೆ'ಯೆಂದು ಕರೆಯಬಹುದಾಗಿದೆ.

ಭೋಗಣ್ಣನು ಅಂತ್ಯಜನನ್ನು ಮನೆಯಲ್ಲಿ ಹೋಗಿಸಿಕೊಂಡ ಕಾರಣವಾಗಿ ಅರಸುಸಮೇತವಾಗಿ ಆ ಪಟ್ಟಣದ ಸಮಾಜವನ್ನೇ ಎದುರು ಹಾಕಿಕೊಳ್ಳಬೇಕಾಯಿತು. ಅದೆಲ್ಲವನ್ನು ಧೈರ್ಯದಿಂದ ಎದುರಿಸಿದ ಭೋಗಣ್ಣನು ಊರಿನಿಂದ ಹೊರಹಾಕಲ್ಪಟ್ಟರೂ ತನ್ನತನವನ್ನು ಸಾಧಿಸಿ ತೋರಿಸಿದ್ದು, 'ಲಿಂಗಗಳು ಆತನೊಂದಿಗೆ ಹೋದುವೆ'ಂಬುದರಿಂದ ವ್ಯಕ್ತವಾಗುತ್ತದೆ. ಇದು ಆತನ ಮತ್ತೊಂದು ಸಾಧನೆಯಾಗಿದೆ. ಇದನ್ನು 'ದೇವನೊಲುಮೆ' ಎಂದು ತಿಳಿಯಬಹುದಾಗಿದೆ.

ಭೋಗಣ್ಣನಿಂದಾಗಿ ಕೆಂಭಾವಿಯ ಅರಸು ಚಂದಿಮರಸನು ವಿಪ್ರಕುಲವನ್ನು ತೊರೆದು, ಶಿವದೀಕ್ಷೆಯನ್ನು ವಹಿಸಿ ಶಿವಶರಣನಾಗಿ ವಚನಸಾಹಿತ್ಯವನ್ನು ಸೃಷ್ಟಿಸಿದ್ದಾನೆ. ಇದಕ್ಕೆಲ್ಲ ಭೋಗಣ್ಣನ ವ್ಯಕ್ತಿತ್ವಚೇ ಕಾರಣವಾಗಿರುವುದರಿಂದ ಇದನ್ನು 'ಭೋಗಣ್ಣನ ಧರ್ಮಪ್ರಚಾರ'ದ ಸಾಧನೆಯೆಂದು ಪರಿಭಾವಿಸಬಹುದಾಗಿದೆ. ಅಂತೆಯೇ ಸಗರನಾಡಿನ ಜನಪದರಲ್ಲಿ ಇಂದಿಗೂ ಜನಜನಿತವಾಗಿರುವ "ಕೆಂಭಾವಿಯಂಥ ಊರಿಲ್ಲ;ಭೋಗಣ್ಣನಂಥ ಶರಣನಿಲ್ಲ;ನಂಬಿಯಣ್ಣನಂಥ ಭಕ್ತನಿಲ್ಲ;ಒಂಟ್ಕಲ್ಲಿನ ಗೋರಿಯಿಲ್ಲ;ಎಂಟಮೂಲಿ ಬಾವಿಯಿಲ್ಲ"* ಎಂಬ ಒಡಪಿನಲ್ಲಿ ಭೋಗಣ್ಣನ ಉಲ್ಲೇಖ ಇರುವುದು ಗಮನಾರ್ಹವಾಗಿದೆ.

'ನಿಜಗುರು ಭೋಗೇಶ್ವರ' ಮತ್ತು 'ನಿಜಗುರು ಭೋಗಸಂಗ' ಎಂಬ ಅಂಕಿತದ ಭೋಗಣ್ಣನ 22 ವಚನಗಳು ಉಪಲಬ್ದವಾಗಿದ್ದು, ಅವು ಕೆಂಭಾವಿ ಭೋಗಣ್ಣನವೆಂದು ಗುರುತಿಸಲಾಗಿದೆ. ಇದರಿಂದಾಗಿ 'ವಚನ ರಚನೆ' ಅಥವಾ ಸಾಹಿತ್ಯಕೃಷಿಯು ಭೋಗಣ್ಣನ ಮತ್ತೊಂದು ಸಾಧನೆಯೆಂದು ಹೇಳಬಹುದಾಗಿದೆ.

**ಅಡಿಟಿಪ್ಪಣಿಗಳು:**

1. ಡಾ.ವಿದ್ಯಾಶಂಕರ. ಎಸ್. ಮತ್ತು ಶಿವಣ್ಣ. ಎಸ್. (ಸಂಃ)– ಕೆಂಭಾವಿ ಭೋಗಣ್ಣನ ಸಾಂಗತ್ಯ, ಅನುಬಂಧ–2, ಪು.48–77, 1978.
2. ಅದೇ, ಪು.48–77, 1978.
3. ಡಾ.ವೀರಣ್ಣ ರಾಜೂರ (ಲೇಃ)– ಕೆಂಭಾವಿ ಭೋಗಣ್ಣ, 'ಸುವರ್ಣಝರಿ', ಪು.123, 1994.
4. ಡಾ.ವಿದ್ಯಾಶಂಕರ. ಎಸ್. ಮತ್ತು ಶಿವಣ್ಣ. ಎಸ್. (ಸಂಃ)– ಕೆಂಭಾವಿ ಭೋಗಣ್ಣನ ಸಾಂಗತ್ಯ, 1978.
5. ಡಾ. ಸುಂಕಾಪುರ ಎಮ್. ಎಸ್. (ಸಂಃ)– 'ಶಿವಭಕ್ತಿಮಹಿಮಾ ರಗಳೆಗಳು', ಭೋಗಣ್ಣನ ರಗಳೆ, ಪು.125, 1976.
6. ಅದೇ, ಪು.226, 1976.
7. ಅದೇ, ಪು.227, 1976.
8. ಅದೇ, ಪು.228, 1976.
9. ಡಾ.ವಿದ್ಯಾಶಂಕರ. ಎಸ್. ಮತ್ತು ಶಿವಣ್ಣ. ಎಸ್. (ಸಂಃ)– ಕೆಂಭಾವಿ ಭೋಗಣ್ಣನ ಸಾಂಗತ್ಯ, ಅನುಬಂಧ–2, ಪು.66–67, 1978.

**ಪರಾಮರ್ಶನ ಗ್ರಂಥಗಳು:**

1. ಡಾ. ಎಂ. ಎಂ. ಕಲಬುರ್ಗಿ– ಶಾಸನಗಳಲ್ಲಿ ಶಿವಶರಣರು, 1970; ಪ್ರ: ಸಿರಿಗನ್ನಡ ಪ್ರಕಾಶನ, ಕನ್ನಡ ವಿಭಾಗ, ಕ.ವಿ.ವಿ. ಧಾರವಾಡ.
2. ಡಾ. ಎಂ. ಎಂ. ಕಲಬುರ್ಗಿ(ಸಂಃ)– ಹರಿಹರನ ರಗಳೆಗಳು, 1999; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
3. ಶಾಂತರಸ– ಬಸವಪೂರ್ವಯುಗದ ಶರಣರು, 1967; ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು.
4. ಶಾಮರಾಯ. ತ. ಸು– ಶಿವಶರಣ ಕಥಾರತ್ನಕೋಶ; 1967; ಪ್ರಃ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–4.
5. ಡಾ. ಎಸ್. ವಿದ್ಯಾಶಂಕರ – ವೀರಶೈವ ಪುರಾಣಗಳು: ಒಂದು ಅಧ್ಯಯನ, 1983; ಪ್ರಃ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಡಾ. ಸಿ. ನಾಗಭೂಷಣ– ಕೆಂಭಾವಿ ಭೋಗಣ್ಣ, 1996; ಪ್ರಃ ಪ್ರಸಾರಾಂಗ, ಗುಲಬರ್ಗಾ ವಿ. ವಿ., ಗುಲಬರ್ಗಾ.